**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ 23/2019

| | | |
|---|---|---|
| ಸಾಕ್ಷಿದಾರರ ಹೆಸರು | - ಜುಂಜಪ್ಪ | ಪಿಡಬ್ಲೂ - 02 |
| ತಂದೆಯ ಹೆಸರು | - ಬಸಪ್ಪ | ಸಿಡಬ್ಲೂ -02 |
| ವಯಸ್ಸು | - 59 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಬಂಕನಕಟ್ಟೆ | |

ದಿನಾಂಕಃ 07-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು, ಆತ ನಮ್ಮ ಊರಿನವನು. ಫ್ರಾಸಾ.1 ಗೊತ್ತು, ಅವರು ನಮ್ಮ ಗ್ರಾಮದವರು. ಚಾಸಾ-6 ಗೊತ್ತು, ಆಕೆ ಫ್ರಾಸಾ.1 ರವರ ತಾಯಿ. ಸಹ ಪಂಚರಾದ ಚಾಸಾ.3 ಗೊತ್ತು.

2. ಈಗ್ಗೆ 7 ವರ್ಷಗಳ ಹಿಂದೆ ಅಜ್ಜಂಪುರ ಪೊಲೀಸರು ನನ್ನನ್ನು ಮತ್ತು ಚಾಸಾ.3 ರವರನ್ನು ಬಂಕನಕಟ್ಟೆಯಲ್ಲಿರುವ ಚಾಸಾ.6 ಗಂಗಮ್ಮರವರ ಮನೆಯ ಮುಂದೆ ಕರೆಸಿದ್ದರು. ಅಲ್ಲಿ ಆರೋಪಿ ಫ್ರಾಸಾ.1 ರವರೊಂದಿಗೆ ಗಲಾಟೆ ಮಾಡಿದ್ದ ಸ್ಥಳದಲ್ಲಿ ಮಹಜರ್ ಮಾಡಲು ಪೊಲೀಸರು ಅಲ್ಲಿಗೆ ಬಂದಿದ್ದರು. ಸದರಿ ಸ್ಥಳವನ್ನು ಚಾಸಾ.6 ರವರು ಪೊಲೀಸರಿಗೆ ತೋರಿಸಿದರು. ಅಲ್ಲಿ ಪೊಲೀಸರು ಮಹಜರನ್ನು ಬರೆದುಕೊಂಡರು. ಅದಕ್ಕೆ ನಾನು, ಚಾಸಾ.3 ರವರು ಸಹಿ ಮಾಡಿದೆವು ಮತ್ತು ಚಾಸಾ.6 ರವರು ತಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕಿದರು. ಸದರಿ ಮಹಜರನ್ನು

ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ನಿಪಿ.4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಈಗ್ಗೆ ಸುಮಾರು ವರ್ಷಗಳು ಕಳೆದಿರುವ ಕಾರಣ ಸದರಿ ಮಹಜರನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಪೊಲೀಸರು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ ಸದರಿ ಫೋಟೋವನ್ನು ಚಾಸಾ.6 ರವರ ಮನೆಯ ಮುಂದೆ ಮಹಜರ್ ಜರುಗಿಸುವ ಸಮಯದಲ್ಲಿ ಪೊಲೀಸರು ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿ.ಪಿ. 5 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ನನ್ನೊಂದಿಗೆ ಚಾಸಾ.3, ಚಾಸಾ.6 ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತದೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಭಾಗಶಃ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ-</u>

3. ದಿಃ 03-12-2018 ರಂದು ತರೀಕೆರೆ ಡಿ ವೈ ಎಸ್ ಪಿ ರವರು ಬೆಳಿಗ್ಗೆ 10.30 ರಿಂದ 11.15 ಗಂಟೆಯವರೆಗೆ ನೀವು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಮಹಜರನ್ನು ಜರುಗಿಸಿದ್ದಾರೆ

ಎಂದರೆ ಸರಿ.

ಪಾಟೀ ಸವಾಲು: ಆರೋಪಿ ಪರವಾಗಿ ಶ್ರೀ ಎಸ್ ಕೆ ಎಂ ವಕೀಲರು ಶ್ರೀ ಐ.ಎಸ್.ಟಿ. ವಕೀಲರ ಪರವಾಗಿಃ

4. ನಾನು ಕೂಲಿ ಕೆಲಸ ಮಾಡಿಕೊಂಡಿದ್ದೇನೆ. ಫ್ರಾಸಾ.1 ನಮ್ಮ ಗ್ರಾಮಸ್ಥರು ಮತ್ತು ನಮ್ಮ ಜಾತಿಗೆ ಸೇರಿದವರು. ನಾನು ಪ್ರತಿದಿನ ಬೆಳಿಗ್ಗೆ 8 ಗಂಟೆಗೆ ಕೂಲಿ ಕೆಲಸಕ್ಕೆ ಹೋಗುತ್ತೇನೆ. ಪೊಲೀಸರು ಮಹಜರಿಗೆ ಬರುವಂತೆ ನನಗೆ ನೋಟೀಸನ್ನು ಕೊಟ್ಟು ಕರೆದಿಲ್ಲ. ಆದರೆ ಚಾಸಾ.6 ರವರು ಮಹಜರಿಗೆ ಬರುವಂತೆ ನನ್ನನ್ನು ಕರೆದಿದ್ದರು. ಚಾಸಾ.6 ರವರು ನಿಮ್ಮ ಅಕ್ಕಪಕ್ಕದ ಮನೆಯವರು ಎಂದರೆ ಸರಿಯಲ್ಲ.

5. ನಿಪಿ.4 ದಾಖಲೆಯಲ್ಲಿ ಏನು ಬರೆದಿದೆ ಎಂದು ನಿಮಗೆ ಗೊತ್ತಿಲ್ಲ ಎಂದರೆಸ ರಿ. ಚಾಸಾ.6 ರವರ ಕೋರಿಕೆಯ ಮೇರೆಗೆ ನೀವು ಸದರಿ ದಾಖಲೆಗೆ ಸಹಿ ಮಾಡಿರುವುದನ್ನು ಹೊರತುಪಡಿಸಿ ನಿಮಗೆ ಬೇರೆ ಮಾಹಿತಿ ಇಲ್ಲ ಎಂದರೆ ಸರಿ. ಆರೋಪಿ ಫ್ರಾಸಾ.1 ರವರ ಮೇಲೆ ಗಲಾಟೆ ಮಾಡಿದ್ದ ಸ್ಥಳವನ್ನು ಚಾಸಾ.6 ರವರು ಪೊಲೀಸರಿಗೆ ತೋರಿಸಿದ್ದಾಗಿ ಅಲ್ಲಿ ಪೊಲೀಸರು ನಿಪಿ.4 ರಂತೆ ಮಹಜರನ್ನು ಜರುಗಿಸಿ ನಿಪಿ.5 ಫೋಟೋವನ್ನು ತೆಗೆದಿದ್ದಾಗಿ ಚಾಸಾ.6 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೀರಿ ಎಂದರೆ ಸರಿಯಲ್ಲ.

1. <u>ಮರು ವಿಚಾರಣೆ</u> ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ